



**ಹಸುರ ಸಿರಿಯ ನಡುವಿನ ಸುಂದರ ಯಾನ**

**ದಕ್ಷಿಣ ಕನ್ನಡ ಮತ್ತು ಕೊಡಗುಗಳ ಹಸಿರುಕೊಂಡಿಯಂತೆ ಕಾಣಿಸುವ ಕುಮಾರ ಪರ್ವತ, ಚಾರಣಿಗರ ಪಾಲಿಗೆ ನಿತ್ಯ ಚುಂಬಕ. ಕಡಿದಾದ ಏರು ದಾರಿಯ ಪಯಣವನ್ನು ಕಾಣಿಸುವ ಈ ಚಾರಣ ಕಥನ – ಪರ್ವತದ ಚೆಲುವಿನ ಜೊತೆಗೆ ಮನುಷ್ಯ ಪ್ರಕೃತಿಯ ವಿಲಾಸವನ್ನೂ ಅರಿಯುವ ಪ್ರಯತ್ನ ನಡೆಸಿದೆ.**

ಕರ್ನಾಟಕದಲ್ಲೇ ಬಹು ಎತ್ತರವಾದ ಬೆಟ್ಟವನ್ನು ಹತ್ತುತ್ತಿರುವಾಗ, ಬೆಟ್ಟದಿಂದ ಇಳಿಯುತ್ತಿದ್ದ ತರುಣನೊಬ್ಬ ಇದ್ದಕ್ಕಿದ್ದಂತೆ 'ಎಲ್ಲಿಂದ ಬಂದಿದ್ದೀರಿ! ಸ್ವಲ್ಪ ಕುಡಿಯಲಿಕ್ಕೆ ನೀರು ಕೊಡ್ತೀರಾ? ಬೇಸರ ಮಾಡಿಕೊಳ್ಳಬೇಡಿ, ನಾನು ತಂದ ನೀರೆಲ್ಲ ಖಾಲಿಯಾಯ್ತು' ಎಂದ. ಆ ದನಿ ನಮ್ಮನ್ನು ತಡೆದು ನಿಲ್ಲಿಸಿತು.

ಕೈಯಲ್ಲಿ ಕೋಲು ಹಿಡಿದು, ತಲೆ ಮೇಲೆ ಬಿಳಿ ವಸ್ತ್ರ ಹಾಕಿಕೊಂಡಿದ್ದ. ಸೋತ ಕಾಲುಗಳಿಂದ ನಿಧಾನವಾಗಿ ನಮ್ಮ ಹತ್ತಿರ ಬಂದು ನಾವು ಕೊಟ್ಟ ಗುಟುಕು ನೀರು ಕುಡಿದು, 'ಸಾಕು ತಗೊಳ್ಳಿ, ಈ ದಾರಿ ಎಂದಿಗೂ ಮುಗಿಯುವುದಲ್ಲ! ಕಾಲು ಸೋಲುವವರೆಗೂ ನಡೆಯುತ್ತಿರಬೇಕು. ನೀವು ನಡೆಯುವ ದಾರಿ ಇನ್ನೂ ಬಹಳ ಇದೆ. ನಿಮಗೆ ಬೇಕಾಗುತ್ತದೆ' ಎಂದು ನೀರು ಕೊಟ್ಟ ನಮಗೆ ಕೃತಜ್ಞತೆ ಹೇಳಿದ. ಆ ಕ್ಷಣದಲ್ಲಿ ಅವನ ಮಾತು ನಮಗೆ ಬಿಡುಗಡೆಯ ಬೆಳಕಿನ ಸೊಲ್ಲಿನಂತೆ ಕೇಳಿಸಿತು.

ನಾವು ಆತನ ಬಳಲಿಕೆಯನ್ನು ನೋಡಿ, ನಮ್ಮಲ್ಲಿದ್ದ ಹಣ್ಣನ್ನು ಅವನಿಗೆ ನೀಡಿದೆವು. ಆತ ಹಣ್ಣನ್ನು ಪಡೆಯಲು ನಿರಾಕರಿಸಿದನಾದರೂ ನಮ್ಮ ಒತ್ತಾಯಕ್ಕೆ ಮಣಿದು ತೆಗೆದುಕೊಂಡ. 'ನಿಮಗೆ ಪುಣ್ಯ ಬರ್ಲಿ, ಖುದಾ ನಿಮ್ಮನ್ನು